ತ್ತಿವೆ. ಆದರೂ ಯಾವ ಯಾವ ಸನ್ನಿವೇಶದಲ್ಲಿ ಮಾಡಲಿಕ್ಕೆ ಸಾಧ್ಯ ಎನ್ನುವ ಬಗ್ಗೆ ಅಧಿಕಾರಿಗಳನ್ನು ಕರೆಸಿ, ನಾವು ನೀವು ಚರ್ಚೆ ಮಾಡೋಣ. ಎಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಬೇಕೋ ಅಲ್ಲಿ ಮಾಡೋಣ. ಇದಕ್ಕಾಗಿ 14 ಲಕ್ಷ ರೂಪಾಯಿಗಳು ಖರ್ಚಾಗುತ್ತದೆಂದು ವರದಿ ಬಂದಿದೆ. ಸಾಧ್ಯವಾದರೆ ಪೂರ್ಣವಾಗಿ ಎಲೆಕ್ಟ್ರಿಫಿಕೇಷನ್ ಮಾಡಿಸಿಕೊಡಲು ಪ್ರಯತ್ನ ಮಾಡುತ್ತೇನೆ. ಈಗ ಹಣದ ತೊಂದರೆ ಇದೆ. ಏನೇ ಇರಲಿ, ಆ ಕೆಲಸವನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ಆಸಕ್ತಿ ಇದೆ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲ ಸೌಲಭ್ಯಗಳನ್ನು ಕಲ್ಪಿಸುವ ಭರವಸೆಯನ್ನು ತಾವು ಕೊಡುತ್ತೀರಾ, ಮತ್ತು ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲ ಒಟ್ಟಿಗೆ ಆಲ್ ಎಲೆಕ್ಟ್ರಿಕ್ ಹೋಮ್ ಮಾಡಲಿಕ್ಕೆ ಆಗುವುದಿಲ್ಲ. ಸ್ಟೇಜ್ ಬೈ ಸ್ಟೇಜ್ ಮಾಡುತ್ತೇವೆ ಅಧಿಕಾರಿಗಳು ಎಲ್ಲ ಮನೆಗಳಿಗೂ ಒಂದೇ ಸಾರಿ ಮಾಡಬೇಕೆಂದರೆ 14 ಲಕ್ಷ ರೂಪಾಯಿಗಳಾಗುತ್ತದೆಂದು ಹೇಳಿದ್ದಾರೆ. ಆದ್ದರಿಂದ ಅಷ್ಟನ್ನು ಒಂದೇ ಸಾರಿಗೆ ಮಾಡಲು ಸಾಧ್ಯವಾಗುವುದಿಲ್ಲ, ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಮುಂದಿನ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂಥ ವ್ಯವಸ್ಥೆ ಮಾಡುತ್ತೇವೆ. ಸುಮಾರು 470 ಮನೆಗಳು ಇವೆ ಹಣದ ಕೊರತೆ ಇರುವುದರಿಂದ ಯೋಜನೆ ಮಾಡುತ್ತಿದ್ದೇವೆ. ಹಿಂದೆ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೀರಿ, ಈವತ್ತೂ ಚರ್ಚೆ ಮಾಡುತ್ತಿದ್ದೀರಿ. ಚರ್ಚೆ ಮಾಡಿ ಒತ್ತಾಯ ಮಾಡಿದ್ದಕ್ಕೋಸ್ಕರ ಮತ್ತು ಅಲ್ಲಿನ ನೌಕರರಿಗೆ ಸೌಕರ್ಯವನ್ನು ಕಲ್ಪಿಸಿಕೊಡುವುದಕ್ಕೋಸ್ಕರವಾಗಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

ವಿಷಯ :— ರಾಜ್ಯ ಹೆದ್ದಾರಿ ಬಳಿಗಿ ತಾಲ್ಲೂಕು ಅನಗವಾಡಿಯ ಬಳಿ ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸುವ ಸೇತುವೆಯ ಬಗ್ಗೆ

ಪ್ರಶ್ನೆ : 171(415) ಶ್ರೀ ಎಸ್.ಎಸ್. ಪಾಟೀಲ್ (ಬಿಳಗಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಿಳಗಿ ತಾಲ್ಲೂಕು ಅನಗವಾಡಿ ಬಳಿ, ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವುದಕ್ಕೆ ಬೇಡಿಕೆ ಏನಾದರೂ ಇದೆಯೆ ;

ಆ) ಹಾಗಿದ್ದಲ್ಲಿ ಇದರ ಸಂಬಂಧದಲ್ಲಿ ಸರ್ಕಾರದ ಮುಂದೆ ಪ್ರಸ್ತಾಪವೇನಾದರೂ ಇದೆಯೇ ;

ಇ) ಪ್ರಸ್ತಾಪವು ಯಾವ ಹಂತದಲ್ಲಿದೆ ; **ಈ)** ಸೇತುವೆಯ ನಿರ್ಮಾಣ ಕಾರ್ಯವು ಕೃಷ್ಣಾ ದೋಲ್ಡಂಡೆ ಯೋಜನೆಯಿಂದಾಗುವ ಮುಳುಗಡೆಯ ಮುನ್ನ ಮುಗಿಯುತ್ತದೆಯೇ ?

ಉತ್ತರ : ಶ್ರೀ ಹೆಚ್.ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).— ಅ) ಇದೆ ಆ) ಈ ಸೇತುವೆಯ ನಿರ್ಮಾಣದ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ. ಇ) ಸದರೀ ಕೆಲಸಕ್ಕೆ 240 ಲಕ್ಷ ರೂ.ಗಳ ಅಂದಾಜುಪಟ್ಟಿಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ನೀವೆದಿಸಲಾಗಿತ್ತು. ಕೇಂದ್ರ ಸರ್ಕಾರದ ಪಾಲಿಗಿಂತ (ಅಂದರೆ ರೂ. 62.50 ಲಕ್ಷಗಳು) ಹೆಚ್ಚಾಗಿ ಬರುವ ಅಧಿಕ ವೆಚ್ಚವನ್ನು ರಾಜ್ಯದ ಸಾಧನ ಸಂಪತ್ತಿನಿಂದ ಭರಿಸಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಹಮತಿಯನ್ನು ಬಯಸಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸೇತುವೆಯ ನಿರ್ಮಾಣ ಯೋಜನಾ ಕಾರ್ಯವು ಇನ್ನೂ ಪ್ರಾರಂಭದ ಹಂತದಲ್ಲಿದೆ. ಆದರೂ ಈ ನಿರ್ಮಾಣ ಕಾರ್ಯವನ್ನು ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗುವ ಮುಳುಗಡೆಯ ಮುನ್ನ ಮುಗಿಸಲು ಸಕಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ

ಶ್ರೀ ಎಸ್ ಎಸ್. ಪಾಟೀಲ್.— ಹೆಚ್ಚಿನ ಹಣಕ್ಕಾಗಿ ಕೇಂದ್ರವನ್ನು ಕಾಯದೆ ರಾಜ್ಯ ಸರ್ಕಾರವೇ ಈ ಸೇತುವೆ ಕೆಲಸವನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಹೆಚ್ ಡಿ ದೇವೇಗೌಡ.— ಈ ಹಿಂದಿನ ಸರ್ಕಾರ ಈ ಸೇತುವೆ ನಿರ್ಮಾಣದ ಬಗ್ಗೆ 125 ಲಕ್ಷ ರೂಪಾಯಿ ಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಟ್ಟಿತ್ತು. ಈ ಹಣದಲ್ಲಿ ಕೇಂದ್ರ ಸರ್ಕಾರ ಅರ್ಧ ಭಾಗ ಕೊಡಲು ಒಪ್ಪಿತ್ತು. ಆದರೆ ಇತ್ತೀಚೆಗೆ ಈ ಅಂದಾಜು ಪಟ್ಟಿಯನ್ನು 240 ಲಕ್ಷ ರೂಪಾಯಿಗಳಿಗೆ ಪರಿಷ್ಕರಿಸಿ ಕೇಂದ್ರಕ್ಕೆ ಕಳುಹಿಸಲಾಯಿತು. ಈಗ ಇದರಲ್ಲಿ ಅರ್ಧ ಭಾಗವನ್ನು ಕೊಡಲು ಸಾಧ್ಯವಿಲ್ಲವೆಂದು ಕೇಂದ್ರದವರು ಹೇಳುತ್ತಿದ್ದಾರೆ. ಹೆಚ್ಚಿನ ಖರ್ಚನ್ನು ನಾವೇ ಹಾಕಬೇಕೆಂದು ಅವರು ಸೂಚನೆ ಕೊಟ್ಟಿದ್ದಾರೆ. ಆದರೆ ನಾವು 240 ಲಕ್ಷ ರೂಪಾಯಿಗಳ ಪೈಕಿ ಅರ್ಧ ಭಾಗ ಕೊಡಬೇಕೆಂದು ಕೇಳಿದ್ದೇವೆ. ಇದರ ಬಗ್ಗೆ ಸರ್ಕಾರ ಇಷ್ಟರಲ್ಲಿಯೇ ಒಂದು ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಎಸ್ ಎಸ್. ಪಾಟೀಲ್.— ಈ ಒಂದು ಬೇಡಿಕೆ ಪ್ರಾರಂಭವಾಗಿ 5.6 ವರ್ಷಗಳ ಮೇಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಈ ಒಂದು ವ್ಯವಹಾರದಲ್ಲಿ ನಮ್ಮ ತಾಲ್ಲೂಕ

ಹಿಂದುಳಿದಿದೆ. ಈಗಲಾದರೂ ಕೇಂದ್ರದವರು ಕೊಡುವ ಆರವತ್ತೈರಡೂವರೆ ಲಕ್ಷ ರೂಪಾಯಿಗಳನ್ನು ಪಡೆದುಕೊಂಡು ಇನ್ನುಳಿದ ಹಣವನ್ನು ರಾಜ್ಯ ಸರ್ಕಾರದವರೇ ಹಾಕಿ ಈ ಕೆಲಸವನ್ನು ಪೂರೈಸುವುದರ ಮೂಲಕ ನಮ್ಮ ತಾಲ್ಲೂಕನ್ನು ಉದ್ಧಾರ ಮಾಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.— ಇದು ಒಂದು ನೀತಿಯ ಪ್ರಶ್ನೆಯಾಗಿದೆ. ಕೇಂದ್ರ ಸರ್ಕಾರದವರು ಹಣ ಕೊಡದಿದ್ದರೆ ರಾಜ್ಯ ಸರ್ಕಾರದವರೇ ವೆಚ್ಚ ಮಾಡುವ ವಿಚಾರ ಬೇರೆ ಒಂದು ವೇಳೆ ನಾವು ಕೇಂದ್ರದ ಮಾತಿಗೆ ಒಪ್ಪಿದರೆ ನಾಳೆ ಎಲ್ಲ ಕೆಲಸಗಳಿಗೂ ಸಹ ಅವರು ಇದೇ ರೀತಿ ಹೇಳಬಹುದು. ಆಗ ನಮಗೆ ಕಷ್ಟವಾಗುತ್ತದೆ. ಈಗಿನ ನಿಯಮದ ಪ್ರಕಾರ ಎಲ್ಲ ಇಂತಹ ಕೆಲಸಗಳಿಗೂ ಕೇಂದ್ರದವರು ಖರ್ಚಿನ ಅರ್ಧ ಭಾಗ ಕೊಡಬೇಕಾಗುತ್ತದೆ. ಅದರಂತೆ ನಾವು ಒತ್ತಾಯ ಮಾಡುತ್ತಿದ್ದೇವೆ. ಅವರೇನಾದರೂ ಕೊಡುವುದಿಲ್ಲವೆಂದರೆ, ನಾವು ಆ ಭಾಗದ ಜನತೆಯ ಕಷ್ಟವನ್ನು ಅರ್ಥ ಮಾಡಿಕೊಂಡು ಸಹಾನುಭೂತಿಯ ಒಂದು ನಿರ್ಣಯ ಮಾಡಲು ಯೋಚನೆ ಮಾಡುತ್ತೇವೆ.

ಶ್ರೀ ಬಿ.ಬಿ ಚಿಮ್ಮನಕಟ್ಟಿ.— ಈಗ ತಾನೆ ಬಾಗಲಕೋಟೆಯ ಪುನರ್ವಸತಿ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದ್ದರಿಂದ ಆ ಕೆಲಸಕ್ಕೆ ಮೊದಲೇ ಈ ಕೆಲಸವನ್ನು ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ಆಲಮಟ್ಟಿ ಡ್ಯಾಂ ಕೆಲಸ ಮುಗಿದ ನಂತರ ಬಿಳಿಗೆ ತಾಲ್ಲೂಕಿನ ಶೇಕಡಾ 80ರಷ್ಟು ಪ್ರದೇಶ ಮುಳುಗಡೆಯಾಗುತ್ತದೆ. ಆದ್ದರಿಂದ ಇದನ್ನು ಮೊದಲೇ ಮುಗಿಸಬೇಕಾಗುತ್ತದೆ. ಆದ್ದರಿಂದ ಆದಷ್ಟೂ ಶೀಘ್ರವಾಗಿ ಮಾಡಲು ನೊಡ್ಡ ಮನಸ್ಸು ಮಾಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.— ಈ ತಾಲ್ಲೂಕು ಮುಳುಗಡೆಯಾಗುವುದಕ್ಕೆ ಮೊದಲೇ ಈ ಕೆಲಸವನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಬಗ್ಗೆ ನಮಗೆ ಕಾಳಜಿ ಬೇಡ

ಶ್ರೀ ಎಸ್. ಎಸ್. ಪಾಟೀಲ್.— 1986ರಲ್ಲಿ ಈ ಭಾಗ ಮುಳುಗಡೆಯಾಗುತ್ತದೆಂದು ತಾವೇ ಹೇಳಿರುವಾಗ ಕೇಂದ್ರದವರು ಹಣ ಕೊಡದಿದ್ದರೆ ತಾವೇ ಹಣಕೊಟ್ಟು ಈ ಕೆಲಸವನ್ನು ಮುಗಿಸುತ್ತೀರಾ? ಇಲ್ಲದಿದ್ದರೆ ಅಲ್ಲಿನ 1ಲಕ್ಷ ಜನರು ಏನು ಮಾಡಬೇಕು?

ಶ್ರೀ ಹೆಚ್.ಡಿ. ದೇವೇಗೌಡ.— ಕೇಂದ್ರ ಸರ್ಕಾರದವರು ಹಣ ಕೊಡುವುದಿಲ್ಲ ಎಂಬ ಭಾವನೆ ಬೇಡ. ಅವರು ಕೊಡದೇ ಇದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರ ಸಹಕಾರವನ್ನು ನಾನು ತೆಗೆದುಕೊಳ್ಳುತ್ತೇನೆ.

ವಿಷಯ : ಕೈಮಗ್ಗ ಅಭಿವೃದ್ಧಿ ನಿಗಮದ ಬಗ್ಗೆ

ಪ್ರಶ್ನೆ : 152(506) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :— ಅ) 1981-82 ಮತ್ತು 1982-83ನೇ ಸಾಲಿಗಾಗಿ ಕೈಮಗ್ಗ ಅಭಿವೃದ್ಧಿ ನಿಗಮಕ್ಕಾಗಿ ಕಾದಿರಿಸಿದ್ದ ಹಣವೆಷ್ಟು; ಆ) ನೇಕಾರರಿಗೆ ಸರಬರಾಜು ಮಾಡಿರುವ ನೂಲಿನ ಮೊತ್ತ ವೆಷ್ಟು; ಇ) ಇದರಲ್ಲಿ ಗುಲ್ಬರ್ಗಾ ಜಿಲ್ಲೆಗಾಗಿ ಕಾದಿರಿಸಿದ ಹಣವೆಷ್ಟು; ಈ) 1981-82 ಮತ್ತು 82-83ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ನೂಲಿನ ಬೇಡಿಕೆ ಪ್ರಮಾಣವೆಷ್ಟಿತ್ತು; ಉ) ಬೇಡಿಕೆಯ ಪ್ರಕಾರ ನೇಕಾರರಿಗೆ ನೂಲಿನ ಪೂರೈಕೆ ಆಗಿದೆಯೆ; ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಉತ್ತರ: ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) —

ಅ) ಕೈಮಗ್ಗ ಅಭಿವೃದ್ಧಿ ನಿಗಮಕ್ಕಾಗಿ ಕಾದಿರಿಸಿದ್ದ ಹಣ ಈ ಕೆಳಕಂಡಂತೆ ಇದೆ.

	1. 1981-82	268.75 ಲಕ್ಷ ರೂ.ಗಳು
	2. 1982.83	219.00 ಲಕ್ಷ ರೂ.ಗಳು

ಆ) ದತ್ತಿ 15 20.000 ಲಕ್ಷ ಕೇಜಿಗಳು ಮೊತ್ತ 535.09 ಲಕ್ಷ ರೂ.ಗಳು

ಇ)	1. 1981-82	48.30 ಲಕ್ಷ ರೂ.ಗಳು
	2. 1982 83	61 78 ಲಕ್ಷ ರೂ.ಗಳು.
ಈ)	1. 1981-82	1,73,000 ಲಕ್ಷ ಕೆಜಿ.ಗಳು.
	2. 1982-83	2,00.000 ಲಕ್ಷ ಕೆಜಿಗಳು.

ಉ) ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಬೇಡಿಕೆಗಳನ್ನು ಪೂರ್ಣವಾಗಿ ಈಡೇರಿಸಲಿಲ್ಲ ನೂಲಿನ ಹೆಚ್ಚುವರಿ ಬೆಲೆ, ಗುಣಮಟ್ಟದ ಕಚ್ಚಾಮಾಲಿನ ಅಭಾವ ಹಾಗೂ ಸಕಾಲಕ್ಕೆ ನೂಲು ದೊರೆಯದಿರುವುದರಿಂದ ಪೂರ್ಣ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಆದಾಗ್ಯೂ ಅಭಿವೃದ್ಧಿ ನಿಗಮವು ನೂಲಿನ ಬೇಡಿಕೆಗಳನ್ನು ತಕ್ಕಷ್ಟು ಪೂರೈಸಲು ಪ್ರಯತ್ನಿಸುತ್ತಿದೆ.

ಶ್ರೀ ಕೆ.ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೆ, ನಮ್ಮ ಗುಲ್ಬರ್ಗಾ ಜಿಲ್ಲೆಗೆ ಸಂಬಂಧಪಟ್ಟಂತೆ ಇಲ್ಲಿ ಕೆಲವು ವಿವರಗಳನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ ಬೇಡಿಕೆ 4ಲಕ್ಷ ಕೆಜಿ. ಗಳೆಂದು ತಿಳಿಸಿದ್ದರೂ ಸಹ ಸರ್ಕಾರದವರು ಕೇವಲ ಎರಡು ಲಕ್ಷ ಕೆಜಿ.ಗಳಿಗೂ ಕಡಿಮೆ ಪೂರೈಕೆ ಮಾಡಿದ್ದಾರೆ. ಈ ಒಂದುಕೊರತೆಯನ್ನು ಯಾವ ರೀತಿ ಪೂರೈಸುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?